7. ಕಿಸಾನ್ ನರ್ಸರಿ ಯೋಜನೆಯಡಿ ಹೊಸ ಹಿಪ್ಪುನೇರಳೆ ತಳಿ ಅಭಿವೃದ್ದಿಗೆ ಪ್ರೋತ್ಸಾಹದನ.

8. ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆಗೆ ಮಲ್ಟಿ ಎಂಡ್ ಘಟಕಗಳ ಸ್ಥಾಪನೆಗೆ ಸಹಾಯಧನ/ಸೌಲಸೌಲಭ್ಯ.

9. ಉತ್ಪಾದಿಸಿ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಮಾರಾಟ ಮಾಡಿದ ರೇಷ್ಮೆಗೆ ಪ್ರೋತ್ಸಾಹಧನ.

10. ಮಿತವ್ಯಯ ಒಲೆಗಳ ಅಳವಡೆಣೆಗೆ ಸಹಾಯಧನ.

11. ಉತ್ಪಾದಿಸಿದ ಗೂಡುಗಳ ವಿಲೇಪಾರಿಗೆ ಗೂಡುಮಾರುಕಟ್ಟೆ ಹಾಗೂ ರೇಷ್ಮೆ ವಿನಿಮಯ ಕೇಂದ್ರಗಳ ಸ್ಥಾಪನೆ.

12. ವಿದ್ಯುತ್ ಜಾಲಿತ ಮಗ್ಗಗಳ ನೇಕಾರರ ಬೇಡಿಕೆಯಾದ ಒಂದೇ ಗುಣಮಟ್ಟದ ಹೆಚ್ಚಿನ ಪ್ರಮಾಣದ ರೇಷ್ಮೆ ಉತ್ಪಾದನೆಗೆ ಅನುಕೂಲಕರ ವಾತಾವರಣ ಕಲ್ಪಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ.

ಈ ಎಲ್ಲಾ ಕ್ರಮಗಳಿಂದಾಗಿ ಪ್ರಸಕ್ತ ಸಾಲಿನಲ್ಲಿ ಹಿಪ್ಪುನೇರಳೆ ಪ್ರದೇಶ 79,778 ಹೆಕ್ಟೇರ್‌ಗಳಿಂದ 84,316 ಹೆಕ್ಟೇರ್‌ಗಳಿಗೆ ಏರಿದೆ. 2003ರ ಡಿಸೆಂಬರ್ ಅಂತ್ಯಕ್ಕಿಂತ 2004 ಡಿಸೆಂಬರ್ ಅಂತ್ಯಕ್ಕೆ 5244 ಮೆ.ಟನ್ ಗೂಡು ಹೆಚ್ಚಾಗಿ ಮಾರುಕಟ್ಟೆಗಳಲ್ಲಿ ವಹಿವಾಟಾಗಿದೆ.

491(717) : ಶ್ರೀ ಸುನೀಲ್ ಕುಮಾರ್.ವಿ (ಕಾರ್ಕಳ) ಮಾನ್ಯ ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೆ.ಎಸ್.ಐ.ಸಿ ಯಲ್ಲಿ ದಾಖಲೆಗಳು ನಾಶವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಾಶವಾಗಿರುವ ದಾಖಲೆಗಳು ಯಾವುವು?

ಇ) ಸದರಿ ದಾಖಲೆಗಳನ್ನು ಎಂದು ನಾಶ ಪಡಿಸಲಾಗಿದೆ?

ಈ) ದಾಖಲೆಗಳು ನಾಶವಾಗಲು ಕಾರಣಗಳೇನು?

ಉ) ದಾಖಲೆಗಳು ನಾಶವಾಗಿರುವ ಹಿನ್ನೆಲೆಯಲ್ಲಿ ತನಿಕೆ ನಡೆಸಲಾಗಿದೆಯೇ?

ಊ) ತನಿಖೆ ನಡೆಸುವ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ?

ಋ) ಕಳೆದ 3 ವರ್ಷಗಳ ಕೆ.ಎಸ್.ಐ.ಸಿಯ ಲಾಭ–ನಷ್ಟಗಳೇನು? (ಸುಪೂರ್ಣ ವಿವರ ನೀಡುವುದು)

ಋೂ) ಕೆ.ಎಸ್.ಐ.ಸಿಯು ಖಾಸಗಿಯಾಗಿ ಲೆಕ್ಕ ಪರಿಶೋಧನೆ ಸಡೆಸಿರುವುದು ನಿಜವೇ?

ಎ) ಖಾಸಗಿ ಲೆಕ್ಕ ಪರಿಶೋಧನೆ ನಡೆಸಲು ಕಾರಣಗಳೇನು?

ಶ್ರೀ ಚೆನ್ನಿಗಪ್ಪ (ರೇಷ್ಮೆ ಸಚಿವರು) :

ಅ) ಇಲ್ಲಾ

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ಉ) ಅನ್ವಯಿಸುವುದಿಲ್ಲ

ಊ) ಅನ್ವಯಿಸುವುದಿಲ್ಲ

ಋ)

ವರ್ಷಗಳು	ಲಾಭ	ನಷ್ಟ (ರೂ. ಲಕ್ಷಗಳಲ್ಲಿ)
2001–02	–	638.92
2002–03	–	736.63
2003–04	–	1870.20

ಋೂ) ನಿಜವಾಗಿರುತ್ತದೆ

ಎ) ಕಂಪನಿಯ ನಿಯಮಗಳ ಪ್ರಕಾರ ಮಹಾಲೇಖಪಾಲರು ಅನುಮೋದಿಸಿರುವ ಸಂಸ್ಥೆಯವರಿಂದ ಲೆಕ್ಕ ಪರಿಶೋಧನೆ ನಡೆಸಬೇಕಾಗುತ್ತದೆ.

492(719) : ಶ್ರೀ ಸುನೀಲ್ ಕುಮಾರ್.ವಿ (ಕಾರ್ಕಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಸ್ಥಾಪಿಸುವ ಮೊದಲು ಇದ್ದಂತಹ ಮೀಸಲಾತಿ ನೀತಗಳಾವುವು?

ಆ) ಯಾವ ಆಧಾರದ ಮೇಲೆ ಈ ಸೌಲಭ್ಯ ನೀಡಲಾಗುತ್ತಿತ್ತು (ವಿವರ ನೀಡುವುದು)

ಇ) ಈಗಿನ ಮೀಸಲಾತಿ ಅನುಸಾರ ಉದ್ಯೋಗಕ್ಕೆ ಹಾಗೂ ವ್ಯಾಸಂಗಕ್ಕೆ ಅನುಸರಿಸುವ ಮಾನದಂಡಗಳಾವುವು;

ಈ) ಆದಾಯ ಮಿತಿಯನ್ನು ನಿಗದಿಪಡಿಸಲಾದ ಮೊತ್ತ ಎಷ್ಟು: (ಪ್ರವರ್ಗವಾರು ವಿವರ ನೀಡುವುದು)

ಡಾ॥ ವೈ.ನಾಗಪ್ಪ(ಸಮಾಜ ಕಲ್ಯಾಣಸಚಿವರು) :

ಅ) ಶಾಶ್ವತ ಹಿಂದುಳಿದ ವರ್ಗಗಳ ಆಯೋಗವು ರಚನೆಯಾಗುವ ಮುನ್ನ ರಾಜ್ಯದಲ್ಲಿನ ಮೀಸಲಾತಿ ನೀತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲೂಡಿ 150 ಬಸಿಎ 94 ದಿ: 17.9.94 ರಲ್ಲಿ ಸ್ಪಷ್ಟಪಡಿಸಲಾಗಿದೆ.

1) ಹಿಂದುಳಿದ ಜಾತಿಗಳ ವರ್ಗೀಕರಣ:

ಹಿಂದುಳಿದ ಜಾತಿಗಳನ್ನು ಒಟ್ಟು 4 ಪ್ರವರ್ಗಗಳಾಗಿ ವಿಂಗಡಿಸಿದ್ದು, 791 ಜಾತಿ, ಉಪಜಾತಿಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಲಾಗಿತ್ತು.

	ವರ್ಗೀಕರಣ	ಜಾತಿಗಳ ಸಂಖ್ಯೆ	ಉಪಜಾತಿಗಳು	ಒಟ್ಟು
1.	ವರ್ಗ–1	895	266	355
2.	ವರ್ಗ–2 (ಎ)	104	257	358
3.	ವರ್ಗ–2 (ಬಿ)	01	–	01
4.	ವರ್ಗ–3 (ಎ)	03	31	32
5.	ವರ್ಗ–3 (ಬಿ)	06	13	49
	ಒಟ್ಟು	**200**	**591**	**791**